(ಇಂದು ದಿಃ 24-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಪಾಟೀ ಸವಾಲು **:- 1** ರಿಂದ **6** ನೇ ಪ್ರತಿವಾದಿಗಳ ಪರ ಶ್ರೀ.**MSH** ವಕೀಲರಿಂದ **:-**

ವಾದಿ ಮಹಾದೇವಮ್ಮ ರವರಿಗೆ ಇಬ್ಬರು ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು. ಅವರುಗಳೆಂದರೆ ಶಿವರೆಡ್ಡಿ, ರಾಮಲಿಂಗಮ್ಮ, ದೇವಿಂದ್ರಮ್ಮ , ರಾಜಶೇಖರ ಮತ್ತು ರಾಮರೆಡ್ಡಿ. ರಾಮರೆಡ್ಡಿ ಸುಮಾರು 25 ವರ್ಷಗಳ ಹಿಂದೆ ತೀರಿಹೋಗಿದ್ದಾರೆ. ರಾಮರೆಡ್ಡಿಗೆ ಮದುವೆಯಾಗಿತ್ತು. ಅವರಿಗೆ ಒಬ್ಬಳು ಮಗಳು ಇದ್ದಾಳೆ. ಅವಳ ಹೆಸರು ಸುವರ್ಣ. ಸುವರ್ಣ ರವರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ.

ದಾವಾ ಐಟಂ ನಂ. 1 ರಿಂದ 9 ಸ್ವತ್ತುಗಳು ಹಿರಿಯರಿಂದ ಬಂದ ಪಿತ್ರಾರ್ಜಿತ ಸ್ವತ್ತುಗಳು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ. ದಾವಾ ಸ್ವತ್ತುಗಳ ಹಳೆ ಪಹಣಿಗಳನ್ನು ನೋಡಿದ್ದೇನೆ. ಅವುಗಳನ್ನು ನ್ಯಾಯಾಲಯಕೆ ಹಾಜರುಪಡಿಸಿಲ್ಲ. ದಾವಾ ಐಟಂ ನಂ.1 ರಿಂದ 9 ರ ಪಹಣಿಗಳಲ್ಲಿ ಬಸಲಿಂಗಮ್ಮ ರವರ ಹೆಸರು ನನ್ನ ತಂದೆ ತೀರಿಹೋದಾಗಿನಿಂದ ಅಂದರೆ 30 ವರ್ಷಗಳಿಂದ ಇದೆ. ಕಳೆದ 70 ವರ್ಷಗಳಿಂದ ಪಹಣಿಗಳಲ್ಲಿ ಬಸಲಿಂಗಮ್ಮಳ ಹೆಸರು ಇದೆ ಎಂದರೆ ಸರಿ. ಬಸಲಿಂಗಮ್ಮಳ ತಂದೆ ಬದುಕಿದ್ದಾಗ ದಾವಾ ಐಟಂ ನಂ. 1 ರಿಂದ 9 ಸ್ವತ್ತುಗಳನ್ನು ಬಸಲಿಂಗಮ್ಮರವರಿಗೆ ದಾನ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ದಾನ ಪತ್ರ ನಾನು ನೋಡಿಲ್ಲ ಕಳೆದ 70 ವರ್ಷಗಳಿಂದ ಬಸಲಿಂಗಮ್ಮ ದಾವಾ ಐಟಂ ನಂ. 1 ರಿಂದ 9 ಸ್ವತ್ತುಗಳಲ್ಲಿ ಉಳುಮೆ ಮಾಡುತ್ತಾ ಬರುತ್ತಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಬಸಲಿಂಗಮ್ಮ ಮತ್ತು ವಾದಿ ಮಹಾದೇವಮ್ಮ ಇಬ್ಬರು ನೋಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. ವಾದಿ ಮಾಹಾದೇವಮ್ಮ ಕೊಡ್ಲಾಗ್ರಮದಲ್ಲಿ ವಾಸ ಇರುತ್ತಿದ್ದರು ಎಂದರೆ ಸರಿ. ಬಸಲಿಂಗಮ್ಮ ಬೆನಕನಳ್ಳಿಯಲ್ಲಿ ವಾಸ ಇದ್ದರು ಎಂದರೆ ಸರಿಯಲ್ಲ, ಸಕ್ಷಿ ಮುಂದುವರೆದು ಅವರು ಕೊಡ್ಲಾದಲ್ಲಿ ವಾಸ ಇದ್ದರು ಎಂದು ಹೇಳುತ್ತಾರೆ. ಕಳೆದ 70 ವರ್ಷಗಳಿಂದ ಪಹಣಿಗಳಲ್ಲಿ ಬಸಲಿಂಗಮ್ಮ ರವರ ಹೆಸರು ಬರುತ್ತಿರುವುದನ್ನು ನಾನು ಪ್ರಶ್ನೇ ಮಾಡಿಲ್ಲ. ನಾನಾಗಲಿ ನನ್ನ ತಾಯಿ ಆಗಲಿ ಪಹಣಿಗಳಲ್ಲಿ ಬಸಲಿಂಗಮ್ಮ ರವರ ಹೆಸರು ಏಕೆ ಬರುತ್ತಿದೆ ಎಂದು ಅವರನ್ನು ಕೇಳಿಲ್ಲ. ದಾವಾ ಐಟಂ ನಂ. 1 ರಿಂದ 9 ಸ್ವತ್ತುಗಳನ್ನು ಈರಪ್ಪ ತಾನು ಬದುಕಿದ್ದಾಗ ದಿಃ 23-03-1956 ರಂದು ಬಸಲಿಂಗಮ್ಮ ರವರಿಗೆ ನೋಂದಾಯಿತ ದಾನಪತ್ರದ ಮೂಲಕ ದಾನ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ದಾನ ಪತ್ರದ ಬಗ್ಗೆ ನಮಗೆ ಗೊತ್ತಿದ್ದ ಕಾರಣ ಬಸಲಿಂಗಮ್ಮ ರವರ ಹೆಸರಿನಲ್ಲಿ ಬರುತ್ತಿದ್ದ ಪಹಣಿಗಳ ಬಗ್ಗೆ ನಾವು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ.

ಕೊಡ್ಲಾ ಗ್ರಾಮದಲ್ಲಿ ಮಹಾದೇವಮ್ಮಳ ಹೆಸರಿನಲ್ಲಿ ಜಮೀನುಗಳು ಇಲ್ಲ. ಮುಂಚೆ ಕೂಡ ಇರಲಿಲ್ಲ. ಕೊಡ್ಲಾ ಗ್ರಾಮದಲ್ಲಿ ಆಸ್ತಿಗಳು ಇದ್ದವು ಅವುಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. 14 ಎಕರೆ ಜಮೀನನ್ನು ನನ್ನ ಅಣ್ಣ ಶಿವರೆಡ್ಡಿ ಖರೀದಿ ಮಾಡಿದ್ದರು ನಂತರ ಆತನೇ ಮಾರಾಟ ಮಾಡಿದ್ದಾನೆ.

ದಾವಾ ಐಟಂ ನಂ. 10 ರಿಂದ 14 2 ರಿಂದ 6 ನೇ ಪ್ರತಿವಾದಿಯರಿಗೆ ಸಂಬಂಧ ಪಟ್ಟ ಸ್ವತ್ತುಗಳು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಹಿರಿಯ ಸ್ವತ್ತುಗಳು ಎಂದು ಹೇಳುತ್ತಾರೆ. ಸದರಿ ಸ್ವತ್ತುಗಳು ಮುಂಚೆ ಮಹಾದೇವಮ್ಮಳ ಹೆಸರಿನಲ್ಲಿ ಇರಲಿಲ್ಲ, ಬಸಲಿಂಗಮ್ಮಳ ಹೆಸರಿನಲ್ಲಿದ್ದವು.

ಮುಂಚೆ ಬಸಲಿಂಗಮ್ಮಳ ಹೆಸರಿನಲ್ಲಿ ಸದರಿ ಸ್ವತ್ತುಗಳು ಇದ್ದವು ಎಂದು ತೋರಿಲಸಲು ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ಸ್ವತ್ತುಗಳು ಬಸಲಿಂಗಮ್ಮಳ ಹೆಸರಿನಲ್ಲಿದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಐಟಂ ನಂ. 2, 3, 5 ರಿಂದ 7 ಸ್ವತ್ತುಗಳು ಬಸಲಿಂಗಮ್ಮರವರ ಸ್ವಂತ ಆಸ್ತಿಗಳಾಗಿದ್ದು ಬದುಕಿದ್ದಾಗ ಅವಳು ಮಾರಾಟ ಮಾಡಿದ್ದಾಳೆ ಎಂದರೆ ಸರಿ. 2 ರಿಂದ 6 ನೇ ಪ್ರತಿವಾದಿಯರು ಅವರ ಆಸ್ತಿಗಳನ್ನು ಭಾಗ ಮಾಡಿಕೊಂಡಿದ್ದಾರೆ ಎಂದರೆ ಅದು ನನ್ನ ಗಮನಕ್ಕೆ ಇಲ್ಲ ಎಂದು ಹೇಳುತ್ತಾರೆ. ನಾನು ನನ್ನ ವಾದ ಪತ್ರದಲ್ಲಿ 2 ರಿಂದ 6 ನೇ ಪ್ರತಿವಾದಿಯರು ವಿಭಾಗ ಮಾಡಿಕೊಂಡಿದ್ದಾರೆ ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿ. ಅವರು ಭಾಗ ಮಾಡಿಕೊಂಡಿರುವ ಸಂಗತಿ 2018 ರಲ್ಲಿ  ನಾವು ಅವರನ್ನು ಭಾಗ ಕೊಡಿ ಎಂದು ಕೇಳಿದಾಗ ಗೊತ್ತಾಯಿತು. 2018 ರಲ್ಲಿ ನಾವು ಹೋಗಿ ಭಾಗ ಕೇಳಿದ್ದೆವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2 ರಿಂದ 6 ನೇ ಪ್ರತಿವಾದಿಯರ ಜಮೀನುಗಳು ಕೊಡ್ಲಾದಲ್ಲಿ ಇವೆ ಎಂದರೆ ಸರಿ. ನನ್ನ ತಾಯಿ ಮದುವೆಯಾಗಿ ಗಂಡನ ಮನೆಗೆ ಹೋದಾಗಿನಿಂದ ತವರು ಮನೆಗೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಮದುವೆಯಾಗಿ ಎಷ್ಟು ವರ್ಷ ಆಗಿದೆ ನನಗೆ ಗೊತ್ತಿಲ್ಲ. ಬಸಲಿಂಗಮ್ಮ ದಾನ ಪತ್ರ ಮಾಡಿದ ದಿನದಂದು ಅವಳ ಮದುವೆಯಾಗಿತ್ತು ಎಂದರೆ ಸರಿ. ಜಮೀನುಗಳಿಂದ ಬಂದ ಆದಾಯವನ್ನು ಮಹಾದೇವಮ್ಮ ಮತ್ತು ಬಸಲಿಂಗಮ್ಮ ಸಮಾನವಾಗಿ ಹಂಚಿಕೊಳ್ಳುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೀತಿ ಬಂದ ಆದಾಯದಿಂದ ಬೇರೆ ಜಮೀನುಗಳನ್ನು ಖರೀದಿ ಮಾಡಿದ್ದಾರೆ ಎಂದು ಸುಳ್ಳುಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ದಾವೆ ಸಲ್ಲಿಸುವ ಕಾಲಕ್ಕೆ ನನ್ನ ತಾಯಿಗೆ 84 ವರ್ಷ ವಯಸ್ಸಾಗಿತ್ತು. ದಾವೆ ಸಲ್ಲಿಸುವ ಕಾಲಕ್ಕೆ ನನ್ನ ತಾಯಿಗೆ ವಯಸ್ಸಿನ ಕಾರಣದಿಂದ ಮರೆವು ಬಂದಿತ್ತು ಎಂದರೆ ಸರಿಯಲ್ಲ. ನನ್ನ ತಾಯಿಗೆ ಮರೆವು ಬಂದಿತ್ತು ಎಂದು ಗೊತ್ತಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಪ್ರತಿವಾದಿಯರನ್ನು ಭಾಗ ಕೊಡಿ ಎಂದು ಕೇಳಿದೆವು ಅವರು ನಿರಾಕರಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನಮಗೆ ಯಾವುದೇ ಹಕ್ಕು ಇಲ್ಲದ ಕಾರಣ ನಾವು ಭಾಗ ಕೇಳುವ ಮತ್ತು ಕೊಡವ ಪ್ರಶ್ನೇ ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ. 10 ರಿಂದ 12 ನ್ನು 2 ರಿಂದ 4 ನೇ ಪ್ರತಿವಾದಿಯರ ಹೆಸರಿನಲ್ಲಿ ನಾಮಕವಾಸ್ತೆ ಖರೀದಿ

ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳು ಅವರ ಸ್ವಂತ ಸ್ವತ್ತುಗಳು ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಜಮೀನುಗಳನ್ನು ಖರೀದಿ ಮಾಡಲು ಆದಾಯ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಬರುತ್ತಿದ್ದ ಆದಾಯ ಜೀವನ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 10 ರಿಂದ 14 ನಮ್ಮ ಒಟ್ಟು ಕುಟುಬಂದ ಸ್ವತ್ತುಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನುಗಳು ಬಸಲಿಂಗಮ್ಮಳ ಸ್ವಂತ ಸ್ವತ್ತುಗಳು ಎಂದರೆ ಸರಿಯಲ್ಲ. ಕಾರಣ ಸದರಿ ಸ್ವತ್ತುಗಳನ್ನು ಮಾರಾಟ ಮಾಡುವ ಹಕ್ಕು ಬಸಲಿಂಗಮ್ಮರವರಿಗೆ ಇತ್ತು ಎಂದರೆ ಸರಿಯಲ್ಲ.

**(1 ರಿಂದ 6 ನೇ ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.